# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 30-06-2021ರ ಬುಧವಾರದಂದು ಪೂರ್ವಾಹ್ನ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇಲ್ಲಿನ ಸಭಾಂಗಣದಲ್ಲಿ ನಡೆದ ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ.

<u>ಹಾಜರಿದ್ದ ಸದಸ್ಯರುಗಳು:</u>

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಶ್ರೀ ಕುಮಾರ | ಸದಸ್ಯರು |
| 7. | ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 8. | ಡಾ. ಬಿ.ರಾಜಣ್ಣ | ಸದಸ್ಯರು |
| 9. | ಡಾ. ವೆಂಕಟೇಶ್ ಜೆ ಎನ್ | ಸದಸ್ಯರು |
| 10. | ಶ್ರೀ. ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 15. | ಡಾ. ಸೈಯದ್ ಕಾರು ಮೊಹಿದ್ದೀನ್ | ಸದಸ್ಯರು |
| 16. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. | ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 18. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

<u>ಹಾಜರಾಗದ ಸದಸ್ಯರು:</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ: 28-05-2021ರಂದು ಜರುಗಿದ ನಾಲ್ಕನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದೃಢೀಕರಿಸಲಾಯಿತು. |
| ಸಾಮಾನ್ಯ ಸಭೆ 2021/6.1 | ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆಯುವ ಕೇಂದ್ರ ಸರ್ಕಾರದ ಸಂಸ್ಥೆಗಳಿಗೆ ಪ್ರತ್ಯೇಕ ಶುಲ್ಕವನ್ನು ನಿಗಧಿಪಡಿಸುವ ಸಂಬಂಧ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| | ವಿಶ್ವವಿದ್ಯಾನಿಲಯದ "University of Mysore- Recognition of Certain Institutions for Specified Studies/Specialized Studies and Research Statutes 2008ರ ಅಧಿನಿಯಮದಂತೆ ಹಲವಾರು ಸಂಸ್ಥೆಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಲಾಗುತ್ತಿದೆ. ಅವುಗಳಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯತೆಗೊಳಪಟ್ಟ DFRL, CFTRI, AIISH, ISEC ಮುಂತಾದ ಸಂಸ್ಥೆಗಳು ಸೇರಿರುತ್ತವೆ. ಆದ್ದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಇವು ಸರ್ಕಾರದ ಶಿಕ್ಷಣ ಸಂಸ್ಥೆಗಳಾಗಿರುವುದರಿಂದ ಶುಲ್ಕವನ್ನು ಪರಿಷ್ಕರಿಸಿ ಇಂತಹ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕ ಶುಲ್ಕವನ್ನು ನಿಗಧಿಪಡಿಸಲು ಪ್ರೊ. ಡಿ.ಆನಂದ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಅದರಂತೆ ಸಮಿತಿಯು ನೀಡಿರುವ ವರದಿಯ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. |
| ತೀರ್ಮಾನ | ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರದ ಶಿಕ್ಷಣ ಸಂಸ್ಥೆಗಳಿಗೆ ಈಗಾಗಲೇ ನಿಗಧಿಪಡಿಸಿರುವ ಶುಲ್ಕದಲ್ಲಿ ಶೇ.50ರಷ್ಟು ಶುಲ್ಕವನ್ನು ವಿನಾಯಿತಿ ನೀಡಿ ~~[illegible]~~ ಪರಿಷ್ಕರಿಸಿ ಸಲ್ಲಿಸಿರುವ ವರದಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2021/6.2 | ಡಾ. ಶೇಖರನಾಯ್ಕ.ಆರ್, ಸಹಾಯಕ ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರ ಮೊದಲ ಹಂತದ ಪದೋನ್ನತಿಯನ್ನು ಹಿಂದೂಡುವ(Prephone) ಬಗ್ಗೆ. |
| ತೀರ್ಮಾನ | ಮಾನ್ಯ ಕುಲಪತಿಗಳು ಮಾತನಾಡಿ ಡಾ. ಶೇಖರನಾಯ್ಕ, ಆರ್, ಸಹಾಯಕ ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ವಿಭಾಗದಲ್ಲಿ 28-02-2003ರಿಂದ ಇಲ್ಲಿಯವರೆಗೂ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ. ಇವರು ಪಡೆದಿರುವ ಪದವಿಗಳು ವೃತ್ತಿಪರ ಪದವಿಗಳಾಗಿದ್ದು ಮತ್ತು ಯುಜಿಸಿಯ 2006ರ ಮಾರ್ಗಸೂಚಿಯಂತೆ ವೃತ್ತಿಪರ ಪದವೀಧರರಿಗೆ ಮೊದಲ ಹಂತದ ಬಡ್ತಿಯನ್ನು 5 ವರ್ಷಕ್ಕೆ ನೀಡಲು ಅವಕಾಶವಿರುವುದರಿಂದ ತಮಗೆ ಮೊದಲ ಹಂತದ ಬಡ್ತಿಯನ್ನು 5 ವರ್ಷಗಳಿಗೆ ನಿಗಧಿಗೊಳಿಸಲು ಕೋರಿದ್ದ ಮನವಿಯನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯು ಅವರು ವ್ಯಾಸಂಗ ಮಾಡಿರುವ ಪದವಿಯು ವೃತ್ತಿಪರ ಪದವಿಯೆಂದು ನಿರ್ಧರಿಸಿ 5 ವರ್ಷಕ್ಕೆ ಪ್ರಥಮ ಹಂತದ ಪದೋನ್ನತಿಯನ್ನು ನೀಡಲು ಶಿಫಾರಸ್ಸು ಮಾಡಿರುವುದನ್ನು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಯುಜಿಸಿಯ 2006ರ ಮಾರ್ಗಸೂಚಿಯಂತೆ ವೃತ್ತಿಪರ ಪದವೀಧರರಿಗೆ ಮೊದಲ ಹಂತದ ಬಡ್ತಿಯನ್ನು 5 ವರ್ಷಕ್ಕೆ ನೀಡಲು ಅವಕಾಶವಿದ್ದುದರಿಂದ ಈ ಸಂಬಂಧ ರಚಿಸಲಾಗಿದ್ದ ಸಮಿತಿಯು |

| | |
|---|---|
| | ಪರಿಶೀಲಿಸಿ ಅವರು ವ್ಯಾಸಂಗ ಮಾಡಿರುವ ಪದವಿಯು ವೃತ್ತಿಪರ ಪದವಿಯೆಂದು ನಿರ್ಧರಿಸಿ 5 ವರ್ಷಕ್ಕೆ ಪ್ರಥಮ ಹಂತದ ಪದೋನ್ನತಿಯನ್ನು ನೀಡಲು ಶಿಫಾರಸ್ಸು ಮಾಡಿರುವುದನ್ನು ಗಮನಿಸಿ ಅದರಂತೆಯೇ ಕ್ರಮಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **ಸಾಮಾನ್ಯ ಸಭೆ** 2021/6.3 | ಶ್ರೀ ಎಂ ಆರ್ ಅನಂತನರಸಿಂಹ, ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುಜಿಸಿ ವೇತನವನ್ನು ವಿಸ್ತರಿಸುವ ಬಗ್ಗೆ. |
| | ದೊಡ್ಡಚಾರಿಯವರು ಮಾತನಾಡಿ, ಸಿಎಜಿ ಆಗಿ 3 ವರ್ಷಗಳಾಗಿವೆ. ನಿವೃತ್ತಿಯಾಗಿದ್ದರೆ ಅವರಿಗೆ ಯುಜಿಸಿ ವೇತನ ನೀಡಲು ಬರುತ್ತಿರಲಿಲ್ಲ. ಆದರೆ ಅವರು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದ ಮೆಟ್ಟಿಲು ಏರಿ ಅದರ ತೀರ್ಪಿನಂತೆ ದಿನಾಂಕ: 05-05-2003ರಿಂದ ದಿನಾಂಕ 07-02-2007ವರೆಗೆ ಸಲ್ಲಿಸಿದ ತಾತ್ಕಾಲಿಕ ಸೇವೆಯನ್ನು ಪರಿಗಣಿಸಲಾಗಿದೆ ಮತ್ತು ದಿನಾಂಕ: 07-02-2007ರಿಂದ ಖಾಯಂ ಮಾಡಿ ನೇಮಕಾತಿ ಆದೇಶವನ್ನು ಹೊರಡಿಸಲಾಗಿತ್ತು. ಹೀಗಾಗಿ ಕಾನೂನುತಜ್ಞರು ಇವರಿಗೆ ಸಿಎಜಿ ಆಕ್ಷೇಪಣೆಯನ್ನು ಕೈಬಿಡುವಂತೆ ನೀಡಿರುವ ಅಭಿಪ್ರಾಯವನ್ನು ಒಪ್ಪಬಹುದಾಗಿದೆ ಎಂದು ತಿಳಿಸಿದರು. |
| **ತೀರ್ಮಾನ:** | ಶ್ರೀ ಎಂ.ಆರ್.ಅನಂತನರಸಿಂಹರವರ ಸಿಎಜಿ ಆಡಿಟ್ ಆಕ್ಷೇಪಣೆಗೆ ಸಂಬಂಧಿಸಿದಂತೆ non-compliance to the conditions of appointment ಎಂಬ ಆಕ್ಷೇಪಣೆಯಲ್ಲಿ ಅವರು ಹೆಸರು ಇರುವುದರಿಂದ pre-revised scaleಗೆ ಇಳಿಸಿರುವುದನ್ನು ಹಾಗೂ ಈ ಸಂಬಂಧ ಕಾನೂನು ಅಭಿಪ್ರಾಯವನ್ನು ಗಮನಿಸಿದ ಸಿಂಡಿಕೇಟ್ pre-revised scaleಗೂ ಮುನ್ನ ಪಡೆಯುತ್ತಿದ್ದ ಯುಜಿಸಿ ವೇತನ ಶ್ರೇಣಿಯ ಸೌಲಭ್ಯವನ್ನು, ಸದರಿಯವರಿಂದ ಸೂಕ್ತ ಮುಚ್ಚಳಿಕೆಯನ್ನು ಪಡೆದು, ಬಿಡುಗಡೆ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ** 2021/6.4 | ಡಾ. ಮೋಕ್ಷಪತಿ, ನಿವೃತ್ತ ಸಹಾಯಕ ಪ್ರಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಜನ್ಮ ದಿನಾಂಕದ ಬಗ್ಗೆ. |
| | ಡಾ. ಮೋಕ್ಷಪತಿರವರು ನಿವೃತ್ತಿಯ ನಂತರದ ಸಮಯದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದು ಸರಿಯಾದ ಮಾರ್ಗವಲ್ಲವೆಂದು ಶ್ರೀ ದೊಡ್ಡಚಾರಿರವರು ಅಭಿಪ್ರಾಯಿಸಿದರು.<br>ಪ್ರೊ. ವೆಂಕೇಟೇಶ್ ಕುಮಾರ್‌ರವರು ಮಾತನಾಡಿ, ಇವರ ಜನ್ಮ ದಿನಾಂಕ ತೆಗೆದುಕೊಳ್ಳುವುದು ಒಳ್ಳೆಯದು. ಏಕೆಂದರೆ ಅವರು ಕರ್ತವ್ಯಕ್ಕೆ ಸೇರುವಾಗ ತಮ್ಮ ಪ್ರಮಾಣ ಪತ್ರಗಳನ್ನು ಸರಿಯಾದ ರೀತಿಯಲ್ಲಿ ನೀಡಲು ಅವರಿಗೆ ಕಾಲಾವಕಾಶ ನೀಡಲಾಗಿರುತ್ತದೆ. ಮಾನ್ಯ ಕುಲಪತಿಗಳು ಇದರ ಬಗ್ಗೆ ಚರ್ಚಿಸಿ ಮತ್ತೊಮ್ಮೆ ಶಾಲೆಯಿಂದ ಟಿ.ಸಿ ಮತ್ತು ಶಾಲೆಯಿಂದ ಪ್ರಮಾಣ ಪತ್ರ ತರಿಸಿಕೊಳ್ಳುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯ ಎಂದು ತಿಳಿಸಿದರು. |
| **ತೀರ್ಮಾನ** | ಡಾ. ಮೋಕ್ಷಪತಿಯವರು ವ್ಯಾಸಂಗ ಮಾಡಿದ ಶಾಲೆಯಿಂದ ಮತ್ತೊಮ್ಮೆ ಟಿ.ಸಿ. ಮತ್ತು ಶಾಲೆಯ ಪ್ರಮಾಣಪತ್ರ ತರಿಸಿಕೊಂಡು ಇದರ ಬಗೆಗೆ ಪರಿಶೀಲಿಸಿ ನಂತರ ಸಿಂಡಿಕೇಟ್‌ನಲ್ಲಿ ಚರ್ಚಿಸಿ ತೀರ್ಮಾನಿಸಲು ನಿರ್ಧರಿಸಲಾಯಿತು. |
| **ಸಾಮಾನ್ಯ ಸಭೆ** 2021/6.5 | ವಿವಿಧ ವಿಭಾಗಗಳ ಅಧ್ಯಕ್ಷರು/ ನಿರ್ದೇಶಕರು/ ಸಂಯೋಜಕರು ಇತರೆ ಮುಖ್ಯಸ್ಥರುಗಳನ್ನು ನೇಮಿಸುವಾಗ ಪ್ರಸ್ತುತ ನೇಮಕ ಮತ್ತು ನಿಯೋಜನೆ ನಿಯಮಗಳಡಿಯಲ್ಲಿ ಗೊಂದಲ ಇರುವುದರಿಮದ ಈ ಕುರಿತು ಮರುಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಕೋರಿರುವ ಬಗ್ಗೆ. |
| | ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ವಿವಿಧ ವಿಭಾಗಗಳ ಅಧ್ಯಕ್ಷರು/ ನಿರ್ದೇಶಕರು/ ಸಂಯೋಜಕರು ಇತರೆ ಮುಖ್ಯಸ್ಥರುಗಳನ್ನು ನೇಮಿಸುವಾಗ ಮತ್ತು ನಿಯೋಜನೆ ಮಾಡುವಾಗ ಅನುಸರಿಸುತ್ತಿರುವ ನಿಯಮಗಳಲ್ಲಿ ಗೊಂದಲವಿದ್ದು ಇದರ ಬಗ್ಗೆ ಕುಲಪತಿಗಳಿಗೆ ಪತ್ರ ಬರೆದಿರುತ್ತೇನೆ ಅವರು ಉತ್ತರ ನೀಡಿರುತ್ತಾರೆ. ಏಕೆಂದರೆ ಅಧ್ಯಾಪಕರ ಜೇಷ್ಠತೆಯ ಪಟ್ಟಿಯಲ್ಲಿಯೇ ದೋಷವಿರುವುದರಿಂದ ಇದನ್ನು ಒಪ್ಪಿಕೊಳ್ಳಲಾಗದು ಎಂದು ತಿಳಿಸಿದರು. |

| | |
|---|---|
| | ದೊಡ್ಡಚಾರಿಯವರು ಮಾತನಾಡಿ, ಜೇಷ್ಠತೆಯ ಆಧಾರದಲ್ಲಿ ನೀಡಿದರೆ ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸಿದರು ಮತ್ತು ಇದರ ಪರಿಹಾರಕ್ಕಾಗಿ ಕಾನೂನು ಸಲಹೆಯನ್ನು ಸಹ ಪಡೆಯಬಹುದಾಗಿದೆಯೆಂದು ತಿಳಿಸಿದರು. ಇದಕ್ಕೆ ಡಾ. ದಾಮೋದರ್‌ರವರು ಮತ್ತು ಚೈತ್ರನಾರಾಯಣರವರು ಬೆಂಬಲಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯಾವುದೇ ವಿವಿಧ ವಿಭಾಗಗಳ ಅಧ್ಯಕ್ಷರು/ ನಿರ್ದೇಶಕರು/ ಸಂಯೋಜಕರು ಇತರೆ ಮುಖ್ಯಸ್ಥರುಗಳನ್ನು ಪ್ರಸ್ತುತವಿರುವ ನೇಮಕ ಮತ್ತು ನಿಯೋಜನೆ ನಿಯಮಗಳಡಿಯಲ್ಲಿಯೇ ನೇಮಕ ಮಾಡಲಾಗುತ್ತಿದೆ. ನಿಯಮ ಮೀರಿ ಯಾವುದೇ ವಿಭಾಗಗಳ ಅಧ್ಯಕ್ಷರು/ ನಿರ್ದೇಶಕರು/ ಸಂಯೋಜಕರು ಇತರೆ ಮುಖ್ಯಸ್ಥರುಗಳನ್ನು ನೇಮಕ ಮಾಡಿರುವುದಿಲ್ಲ ಎಂದು ತಿಳಿಸಿದರು ಮತ್ತು ಬೋಧಕ ವರ್ಗದವರ ಜೇಷ್ಠತಾಪಟ್ಟಿಯನ್ನು ಸಿದ್ದಪಡಿಸಲು ಒಂದು ಸಮಿತಿಯನ್ನು ರಚಿಸುವುದಾಗಿ ಕುಲಪತಿಗಳು ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆಯನ್ನು ಸೂಚಿಸಿದರು. |
| ತೀರ್ಮಾನ | ಚರ್ಚೆಯ ನಂತರ ಬೋಧಕ ವರ್ಗದವರ ಜೇಷ್ಠತಾಪಟ್ಟಿಯನ್ನು ನಿಯಮಾನುಸಾರ ಸರಿಪಡಿಸಲು ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಮತ್ತು ಸದರಿ ಸಮಿತಿಯು ಸಲ್ಲಿಸುವ ಪರಿಷ್ಕೃತ ಜೇಷ್ಠತಾಪಟ್ಟಿಯನ್ನು ಮುಂಬರುವ ಸಭೆಯಲ್ಲಿ ಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/6.6 | Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ |
| | ದೊಡ್ಡಚಾರಿರವರು ಮಾತನಾಡಿ Central for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಡಾ. ಡಿ.ಸಿ.ನಂಜುಂಡ, ಡಾ. ಸಿದ್ದರಾಜು ವಿ.ಜಿ ಮತ್ತು ಡಾ. ದಿನೇಶ್ ಪಿ.ಟಿರವರು ಬೋಧಕರಾಗಿ ಸುಮಾರು ವರ್ಷಗಳಿಂದ ಯುಜಿಸಿಯ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವರನ್ನು ಮುಂದುವರೆಸಲು ಕೋರಿದರು.<br>ಕುಲಪತಿಗಳು ಮಾತನಾಡಿ, ಯುಜಿಸಿಯು ನೀಡುವ ಪ್ರಾಜೆಕ್ಟ್‌ನ ಅನುದಾನದಲ್ಲಿ ಇವರಿಗೆ ವೇತನ ನೀಡುತ್ತಿದ್ದೇವೆ. ಕೆಲವೊಂದು ಬಾರಿ ಯುಜಿಸಿಯಿಂದ ಹಣ ಬರುವುದು ತಡವಾದರೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ವೇತನ ನೀಡಿ ನಂತರ ಭರಿಸಿಕೊಳ್ಳಲಾಗುತ್ತಿದೆ ಮತ್ತು ಇವರಿಗೆ ಕೆಲವು ಸವಲತ್ತು ಸಹ ಯುಜಿಸಿ ನೀಡಿದೆ. ಯುಜಿಸಿಯು 7ನೇ ವೇತನ ನೀಡಲು ಒಪ್ಪಿದರೆ ವಿಶ್ವವಿದ್ಯಾನಿಲಯದ ಅಭ್ಯಂತರವೇನಿಲ್ಲವೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಯುಜಿಸಿಯು ಹೊರಡಿಸಿರುವ ನೋಟಿಸ್‌ನಂತೆ ಅವರನ್ನು 31-03-2022ರವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ. ಸಭೆ 2021/6.7 | ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗೆ PM CARES Fund ಮಾದರಿಯಲ್ಲಿ ನಿಧಿ ಸ್ಥಾಪಿಸಿರುವ ಬಗ್ಗೆ. |
| | ಡಾ. ಈ.ಸಿ ನಿಂಗರಾಜೇಗೌಡ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯವರಿಗೆ ಕೊರೋನಾ ವೈರಸ್ ನಿಂದ ಅವಘಡ ಸಂಭವಿಸಿದರೆ, ಅಪಘಾತದಿಂದ ಗಾಯಗೊಂಡರೆ ಅಥವಾ ನಿಧನ ಹೊಂದಿದರೆ, ಅನಾರೋಗ್ಯ ಪೀಡಿತರಾದರೆ ಇಂತಹ ತಾತ್ಕಾಲಿಕ ಉದ್ಯೋಗಿಗಳ ಅನುಕೂಲಕ್ಕಾಗಿ PM CARES Fund ಮಾದರಿಯಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಸಹ ಪ್ರತ್ಯೇಕವಾದ ಖಾತೆ ತೆರೆದು ನಿಧಿ ಸ್ಥಾಪಿಸಬೇಕೆಂದು ಮತ್ತು ಆಸಕ್ತ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳು, ವಿಶ್ವವಿದ್ಯಾನಿಲಯದ ಹಿರಿಯ ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಧಾನಿಗಳು ಇಚ್ಛಾನುಸಾರ ವೈಯಕ್ತಿಕ ಸಹಾಯಧನ ನೀಡುವಂತೆ ವಿನಂತಿಸಿಕೊಳ್ಳುವುದು ಸೂಕ್ತವೆಂದು ಕೋರಿರುತ್ತಾರೆ. |

| | |
|---|---|
| | ಶ್ರೀ ದೊಡ್ಡಾಚಾರಿಯವರು ಮಾತನಾಡಿ, ತಾತ್ಕಾಲಿಕ ನೌಕರರುಗಳಿಗೆ ಪ್ರಸ್ತುತ ಇ.ಎಸ್.ಐ. ಮತ್ತು ಪಿ.ಎಫ್ ಅಳವಡಿಸಲಾಗಿರುತ್ತದೆ ಅತಿ ಕಡಿಮೆ ದರದಲ್ಲಿ ದೊರೆಯುವ General Insurance and Group Health Insurance or Health Insuranceಗಳಲ್ಲಿ ವಿಮೆ ಮಾಡಿಸಲು ಅವಕಾಶ ಇರುತ್ತದೆ. ಹಾಗೆಯೇ BPL Card ಹೊಂದಿರುವವರಿಗೆ ಎಲ್ಲಾ ರೀತಿಯ ಚಿಕಿತ್ಸೆಗಳು ಉಚಿತವಾಗಿ ದೊರಕುತ್ತದೆ. ಆದುದರಿಂದ ವಿಶ್ವವಿದ್ಯಾನಿಲಯವು ಕಾನೂನು ಬದ್ಧವಾಗಿ ನೀಡಬಹುದಾದ ಅನುಕೂಲಗಳನ್ನು ಮಾತ್ರ ಅನುಷ್ಠಾನಗೊಳಿಸಬೇಕೆಂದು ಸಲಹೆ ನೀಡಿದರು.<br>ಕೋವಿಡ್–19 ನಿಂದ ನಿಧನ ಹೊಂದಿ, ಆ ಕುಟುಂಬಕ್ಕೆ ಬೇರೆ ಆಸರೆ ಇಲ್ಲದವರಿಗೆ ಮಾತ್ರ ಈ ವ್ಯವಸ್ಥೆ ಕಲ್ಪಿಸಬಹುದಾಗಿದೆ ಎಂದು ಮಾನ್ಯ ಕುಲಪತಿಯವರು ಅಭಿಪ್ರಾಯಪಟ್ಟರು.<br>ಪ್ರೊ. ವೆಂಕಟೇಶ್ ಕುಮಾರ್ ರವರು ಮಾತನಾಡಿ, PM CARES Fund ಸ್ಥಾಪಿಸಿರುವಂತೆ ಇಚ್ಛಾನುಸಾರ ಇತರೆ ನಿಧಿಗಳನ್ನು ಸ್ಥಾಪಿಸುವುದಕ್ಕೆ ವಿಶ್ವವಿದ್ಯಾನಿಲಯದಲ್ಲಿ ಅವಕಾಶ ಇರುವುದಿಲ್ಲ. ಇಂತಹ ಸಹಾಯವನ್ನು NGO ಸಂಸ್ಥೆಗಳು ಮಾತ್ರ ಮಾಡುತ್ತವೆ ಎಂದು ತಿಳಿಸಿದರು.<br>ಡಾ. ಈ.ಸಿ.ನಿಂಗರಾಜೇಗೌಡ ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರನಾದ ಶ್ರೀ ಪ್ರಸನ್ನ ಅವರು ಕೋವಿಡ್–19ಯಿಂದ ಮೃತರಾಗಿದ್ದು, ಅವರ ಪತ್ನಿಯೂ ಸಹ ನಿಧನರಾಗಿರುವುದರಿಂದ ಮಕ್ಕಳುಗಳು ಅನಾಥರಾಗಿರುತ್ತಾರೆ. ಇವರಿಗೆ ಸಹಾಯಧನವನ್ನು ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಜಂಟಿ ಖಾತೆಯನ್ನು ತೆರೆದು ಸಹಾಯ ಮಾಡಿರುವುದನ್ನು ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಿಗಳಿಗೆ ಲಸಿಕೆ ನೀಡಿರುವುದನ್ನು ಶ್ಲಾಘಿಸಿದರು. ಹಾಗೆಯೇ ಪ್ರಸ್ತಾಪಿತವಾಗಿರುವ ವಿಷಯವನ್ನು ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ಅನುಮೋದಿಸಲು ಕೋರಿದರು. |
| **ತೀರ್ಮಾನ:** | ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ವಿಶ್ವವಿದ್ಯಾನಿಲಯವು PM CARES Fund ಮಾದರಿಯಲ್ಲಿ ನಿಧಿ ಸ್ಥಾಪಿಸುವ ಸಂಬಂಧ ಸಾಧಕ ಬಾಧಕಗಳನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/6.8 | UGC-HRDCಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ New Pension Scheme ಅಳವಡಿಸುವ ಕುರಿತು. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಕುಲಸಚಿವರ ಪತ್ರ ಸಂಖ್ಯೆ ಡಿವಿ1/42/ಎಸಿ/ಎಎಸ್‌ಸಿ/2004–05 ದಿನಾಂಕ 29.07.2013ರ ಪ್ರಕಾರ ಈಗಾಗಲೇ ವೇತನ, ವೇತನ ಶ್ರೇಣಿ ಮತ್ತು ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡುತ್ತಿದ್ದು ಅದರಂತೆಯೇ ಸದರಿ ದಿನಾಂಕದಿಂದಲೇ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾನಿಲಯದ ವತಿಯಿಂದ New Defined Contribution Pension Scheme (New Pension Scheme) ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಇತರೆ NPS ಸೌಲಭ್ಯವನ್ನು ಪಡೆಯುತ್ತಿರುವ ಉದ್ಯೋಗಿಗಳಂತೆಯೇ ಕಾರ್ಯಗತಗೊಳಿಸಲು ಸಂಬಂಧಪಟ್ಟ ಪ್ರಾಯೋಜಿತ ಸಂಸ್ಥೆಗೆ ಪತ್ರ ಬರೆದು ಪ್ರಾಯೋಜಿತ ಸಂಸ್ಥೆಯಿಂದ ಅನುಮತಿ ದೊರೆತ ನಂತರ ಸದರಿ ಉದ್ಯೋಗಿಗಳಿಗೆ New Pension Scheme ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |

| | |
|---|---|
| ಸಾಮಾನ್ಯ. ಸಭೆ 2021/6.9 | 2020–21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು |
| ತೀರ್ಮಾನ | 2020–21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪರಿಶೋಧನೆ ಮಾಡುವುದಕ್ಕೆ ಸಿದ್ಧಪಡಿಸಲಾದ ವಾರ್ಷಿಕ ಲೆಕ್ಕ ಪತ್ರಗಳನ್ನು ವಿಶ್ವವಿದ್ಯಾನಿಲಯದ ಕಾಯ್ದೆ 2000 ಸೆಕ್ಷನ್ 47(2)ರ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಿ ಲೆಕ್ಕಪರಿಶೋಧಕರಿಂದ ಪರಿಶೋಧಿಸಲು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ. ಸಭೆ 2021/6.10 | 2020–21ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ/ಕುಟುಂಬ ಪಿಂಚಣಿ ಸೌಲಭ್ಯಗಳ ಪಾವತಿಗೆ ಸರ್ಕಾರದಿಂದ ಮಂಜೂರಾದ 2020–21ನೇ ಸಾಲಿನಲ್ಲಿ ಅನುದಾನ ಕೊರತೆ ಇರುವುದರಿಂದ ಪಿಂಚಣಿ "CORPUS FUND'' ನಿಂದ ಹಣ ಹಿಂಪಡೆಯುವ ಸಂಬಂಧ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿವೃತ್ತರಾಗುವ/ನಿವೃತ್ತರಾದ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ 2021–22ನೇ ಸಾಲಿನಲ್ಲಿ ನಿವೃತ್ತಿ ಸೌಲಭ್ಯಗಳು ಹಾಗೂ ಮಾಹೆಯಾನ ಪಿಂಚಣಿ ಪಾವತಿಗಾಗಿ ಸರ್ಕಾರಕ್ಕೆ ರೂ.90 ಕೋಟಿಗಳಿಗೆ ಆಯವ್ಯಯ ಸಲ್ಲಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಹೆಚ್‌ಪಿಯು 2021, ದಿನಾಂಕ 26.04.2021 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತಿ ವೇತನಕ್ಕಾಗಿ ಸಹಾಯಾನಯಧಾನ ರೂ.44.16 ಕೋಟಿಗಳನ್ನು ಮಾತ್ರ ಮಂಜೂರು ಮಾಡಲಾಗಿದೆ. ನಾವು ಕೋರಿರುವ ಮೊತ್ತದ ಶೇ. 50ಕ್ಕಿಂತ ಅಧಿಕವಾಗಿ ಕಡಿತಗೊಳಿಸಿರುವುದರಿಂದ, ಕಡಿತಗೊಳಿಸಿರುವ ಮೊತ್ತವನ್ನು ಮಂಜೂರು ಮಾಡಲು ಕೋರಿ ಸರ್ಕಾರಕ್ಕೆ ಈಗಾಗಲೇ ಎರಡು ಪತ್ರಗಳನ್ನು ಕಳುಹಿಸಲಾಗಿದೆ. ಈ ಹಣವು ಇದುವರೆವಿಗೂ ಮಂಜೂರಾಗದ ಕಾರಣ ವ್ಯತ್ಯಾಸದ ಪಿಂಚಣಿ ಮೊತ್ತವನ್ನು ಸರಿದೂಗಿಸಲು ಸಾಧ್ಯವಾಗತ್ತಿಲ್ಲವಾದುದರಿಂದ, ಮೇಲ್ಕಂಡ ನಿವೃತ್ತಿ ಸೌಲಭ್ಯಗಳು, ಮಾಹೆಯಾನ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳ ಪಾವತಿಯು ಸರ್ಕಾರದಿಂದ ಮಂಜೂರಾಗಿರುವ ಮೊತ್ತಕ್ಕಿಂತ ಅಧಿಕವಾಗಿರುವುದರಿಂದ ಮಾನ್ಯ ಕುಲಪತಿಗಳ ಆದೇಶದಂತೆ ಎಲ್.ಐ.ಸಿ.ಯಲ್ಲಿ ಠೇವಣಿ ಇಟ್ಟಿರುವ "CORPUS FUND" – "New Group Superannuation Cash Accumulation Benefit Scheme"ನಲ್ಲಿ ಠೇವಣಿ ಇಟ್ಟಿರುವ ಹಣದಿಂದ ಮಾಹೆಯಾನ ಕೊರತೆ ಇರುವ ಮೊತ್ತವನ್ನು ಹಿಂಪಡೆದು ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ಪಾವತಿಸಲು ಹಾಗೂ ಸರ್ಕಾರದಿಂದ ಅನುದಾನ ಬಂದ ನಂತರ ಮರು ಹೂಡಿಕೆ ಮಾಡಲು ಹಣಕಾಸು ಸಮಿತಿಯು ಒಪ್ಪಿಗೆ ನೀಡಿರುವುದನ್ನು ಹಣಕಾಸು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಭಾರತೀಯ ಜೀವ ವಿಮಾ ನಿಗಮ(LIC)ದಲ್ಲಿ "CORPUS FUND" – "New Group Superannuation Cash Accumulation Benefit Scheme"ನಲ್ಲಿ ಠೇವಣಿ ಇಟ್ಟಿರುವ ಹಣದಿಂದ ಕೊರತೆ ಇರುವ ಮೊತ್ತವನ್ನು ಹಿಂಪಡೆದು ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ಪಾವತಿಸಲು ಹಾಗೂ ಸರ್ಕಾರದಿಂದ ಅನುದಾನ ಬಂದ ನಂತರ ಮರುಹೂಡಿಕೆ ಮಾಡಲು ದಿನಾಂಕ 22.06.2021ರ ಹಣಕಾಸು ಸಮಿತಿಯು ಒಪ್ಪಿಗೆ ನೀಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2021/6.11 | ಸಹೋದ್ಯಮ ಖಾತೆಗೆ ಇತರೆ ಖಾತೆಯಿಂದ ಹಣ ವರ್ಗಾವಣೆ ಮಾಡಿರುವ ಬಗ್ಗೆ |
| ತೀರ್ಮಾನ | ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಆಂತರಿಕ ಆದಾಯವು ನಿರೀಕ್ಷಿತಮಟ್ಟದಲ್ಲಿ ಸಂಗ್ರಹವಾಗದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆಂತರಿಕ ಆದಾಯ ವೃದ್ಧಿಸಿದ ನಂತರ ಆಯಾಯ ಖಾತೆಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವ ಬದ್ಧತೆಗೊಳಪಟ್ಟು ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳಿಂದ ತಾತ್ಕಾಲಿಕವಾಗಿ ಸಹೋದ್ಯಮ ಖಾತೆಗೆ ವರ್ಗಾಯಿಸಿಕೊಂಡು ಪಾವತಿಸಬೇಕಾಗಿದ್ದ ಹುಂಡಿಗಳ ಮೊತ್ತ ಹಾಗೂ ಸಿಬ್ಬಂದಿ ವೇತನ, ಇನ್ನಿತರೆ ಭತ್ಯೆಗಳನ್ನು ಪಾವತಿಸಲಾಗಿರುವುದಕ್ಕೆ ಕ್ರಮಕೈಗೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ. ಸಭೆ 2021/6.12 | ಐ.ಡಿ.ಎಫ್. ಖಾತೆಗೆ ಇತರೆ ಖಾತೆಯಿಂದ ಹಣ ವರ್ಗಾವಣೆ ಮಾಡಿರುವ ಬಗ್ಗೆ |
| ತೀರ್ಮಾನ | ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳಿಂದ ತಾತ್ಕಾಲಿಕವಾಗಿ ಮೊತ್ತ ವರ್ಗಾವಣೆ ಮಾಡಿಕೊಂಡಿರುವ ಮೊತ್ತವನ್ನು ವಿಶ್ವವಿದ್ಯಾನಿಲಯದ ಆಂತರಿಕ ಆದಾಯ ವೃದ್ಧಿಸಿದ ನಂತರ ಆಯಾಯ ಖಾತೆಗಳಿಗೆ ಹೊಂದಾಣಿಕೆ ಮಾಡಲು ದಿನಾಂಕ 22.06.2021ರಂದು ನಡೆದ ಹಣಕಾಸು ಸಮಿತಿ ಸಭೆಯು ಅನುಸಮರ್ಥಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಸಹ ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/6.13 | "ಡಾ. ಯು.ಆರ್.ಅನಂತಮೂರ್ತಿ ಪೀಠ"ಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದಿತಗೊಂಡಿರುವ ಪರಿನಿಯಮಾವಳಿಯನ್ನು ಪ್ರಕಟಿಸುವ ಬಗ್ಗೆ. |
| | "ಡಾ. ಯು.ಆರ್.ಅನಂತಮೂರ್ತಿ ಪೀಠ"ಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ ಪರಿನಿಯಮಾವಳಿಯ ಉದ್ದೇಶಗಳನ್ನು ಈಡೇರಿಸಲು ಅಧಿಸೂಚನೆ, ಪ್ರಕಟಣೆ ಆದೇಶ ಹೊರಡಿಸುವ ಸಂಬಂಧ ಕೂಲಂಕಷವಾಗಿ ಪರಿಶೀಲಿಸಿ ಚರ್ಚಿಸಿದ ನಂತರ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಬೇಕೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2021/6.14 | ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜಿನ ಅಧ್ಯಾಪಕರುಗಳಿಗೆ ಪ್ರಾಧ್ಯಾಪಕ Level 14 (ಎಜಿಪಿ 10,000)ಗೆ ಪದೋನ್ನತಿ ನೀಡುವ ಸಂಬಂಧ Score cardಗೆ ಅನುಮೋದನೆ ಪಡೆಯುವುದರ ಬಗ್ಗೆ |
| | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಒಂದಾದ ಲಲಿತಕಲಾ ಕಾಲೇಜಿನ ಸಹ ಪ್ರಾಧ್ಯಾಪಕರುಗಳಿಗೆ 2018 ಯುಜಿಸಿ ನಿಯಮಾವಳಿಯ ಅನ್ವಯ ಪ್ರಾಧ್ಯಾಪಕ Level 14 (ಎಜಿಪಿ 10,000)ರ ಪದೋನ್ನತಿ ನೀಡುವ ಸಂಬಂಧ, ಎ.ಪಿ.ಐ ಸ್ಕೋರ್‌ನ ಲೆಕ್ಕಾಚಾರಕ್ಕಾಗಿ ಬಾಹ್ಯ ತಜ್ಞರನ್ನು ನೇಮಿಸಲು ಸಿ.ಎ.ಎಸ್. ಕುಂದು ಕೊರತೆ ಪರಿಶೀಲನಾ ಸಮಿತಿಯು ಅಭಿಪ್ರಾಯಿಸಿದ ಹಿನ್ನೆಲೆಯಲ್ಲಿ, ಸನ್ಮಾನ್ಯ ಕುಲಪತಿಗಳು ನಾಮನಿರ್ದೇಶನ ಮಾಡಿದಂತಹ ಬಾಹ್ಯ ತಜ್ಞರನ್ನೊಳಗೊಂಡ ಸಮಿತಿಯು ಸದರಿ ಕಾಲೇಜಿನ ಸಹ ಪ್ರಾಧ್ಯಾಪಕರುಗಳಿಗೆ Level 14 (ಎಜಿಪಿ 10000)ರ ಪದೋನ್ನತಿಗಾಗಿ ಅನುಸರಿಸಬೇಕಾದ ಕ್ರಮದ ಸಂಬಂಧ ಸಿದ್ಧಪಡಿಸಲಾದ Score card ಅನ್ನು ಸಿಂಡಿಕೇಟ್ ಕೂಲಂಕಷವಾಗಿ ಪರಿಶೀಲಿಸಿತು. |
| ತೀರ್ಮಾನ | ಬಾಹ್ಯ ತಜ್ಞರನ್ನೊಳಗೊಂಡ ಸಮಿತಿಯು ಸಿದ್ಧಪಡಿಸಲಾದ Score cardಗೆ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿರುವುದನ್ನು ಗಮನಿಸಿ ಲಲಿತಕಲಾ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ 2018 ಯುಜಿಸಿ ನಿಯಮಾವಳಿಯ ಅನ್ವಯ |

| | |
|---|---|
| | Level 14 (ಎಜಿಪಿ 10000)ರ ಪದೋನ್ನತಿ ನೀಡಲು ಸಿದ್ಧಪಡಿಸಲಾದ Score card ಅನ್ನು ಸಿಂಡಿಕೇಟ್ ಸಹ ಅನುಮೋದಿಸಿತು. |
| ಸಾಮಾನ್ಯ ಸಭೆ 2021/6.15 | ಶ್ರೀ ಟಿ.ಸಿ.ನಾರಾಯಣ, ಪ್ರಥಮ ದರ್ಜೆ ಗುಮಾಸ್ತರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರ ತಾತ್ಕಾಲಿಕ ಸೇವೆಯನ್ನು ಖಾಯಂ ಸೇವೆಯನ್ನು ಪರಿಗಣಿಸುವ ಬಗ್ಗೆ. |
| ತೀರ್ಮಾನ | ಶ್ರೀ ಟಿ.ಸಿ.ನಾರಾಯಣ, ಪ್ರಥಮ ದರ್ಜೆ ಗುಮಾಸ್ತರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರ ತಂದೆಯವರು ಮಂಡ್ಯದ ಸ್ನಾತಕೋತ್ತರ ಕೇಂದ್ರಕ್ಕೆ ಜಮೀನು ನೀಡಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಯೋಜನಾ ನಿರಾಶ್ರಿತರೆಂದು ಪರಿಗಣಿಸಿ ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿರುವ ತಾತ್ಕಾಲಿಕ ಸೇವೆಯನ್ನು ಸರ್ಕಾರದ ಆದೇಶದ ಅನ್ವಯ ಸದರಿ ನಿಯಮವು ಜಾರಿಗೊಳಿಸಿದ ದಿನಾಂಕದಿಂದ ಅಂದರೆ 23-11-2000ರಿಂದಲೇ ಜಾರಿಗೆ ಬಂದಂತೆ ಈಗಾಗಲೇ ಆರ್ಥಿಕ ಸೌಲಭ್ಯಗಳನ್ನು ವಿಸ್ತರಿಸಲಾಗಿದ್ದು, ಇವರ ಜೇಷ್ಠತೆಯನ್ನು ಪರಿಗಣಿಸುವ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೂಲಂಕಷವಾಗಿ ಪರಾಮರ್ಶಿಸಿ ಅದೇ ದಿನಾಂಕದಿಂದ ಸದರಿಯವರ ಸೇವಾ ಜೇಷ್ಠತೆಯನ್ನು ಕೆ.ಸಿ.ಎಸ್.ಆರ್. ನಿಯಮಾನುಸಾರ ಕ್ರಮವಹಿಸಿ ನಿಗಧಿಪಡಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/6.16 | Transgender ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯವನ್ನು ನೀಡುವ ಬಗ್ಗೆ. |
| | ಡಾ.ಚೈತ್ರ ನಾರಾಯಣ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಪತ್ರದಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯವು 2014ರ NALSA V/s Union of India ಪ್ರಕರಣದಲ್ಲಿ Transgender (ತೃತೀಯ ಲಿಂಗ) ಇವರಿಗೆ ಹಿಂದುಳಿದ ವರ್ಗಕ್ಕೆ ಮೀಸಲಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿರುವಂತೆ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಒಂದು ಸೀಟು Transgender ಇವರಿಗೆ ಮೀಸಲಿಡುವಂತೆ ಕೋರಿರುವುದನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಚರ್ಚಿಸಿತು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಹಾಲಿ ಚಾಲ್ತಿಯಲ್ಲಿರುವ ಸ್ನಾತಕೋತ್ತರ ಮಾರ್ಗಸೂಚಿ 4.9ರ ಪ್ರಕಾರ ಈಗಾಗಲೇ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶವಿರುವುದರಿಂದ, Admission Reformation committeeನಲ್ಲಿ Transgender ಇವರಿಗೆ ಸೀಟುಗಳ ಹಂಚಿಕೆಯ ಬಗ್ಗೆ prospectus ಹಾಗೂ ಪ್ರವೇಶಾತಿ ಅರ್ಜಿಯಲ್ಲಿ ನಮೂದಿಸಲು ಸಿಂಡಿಕೇಟ್ ತೀರ್ಮಾನಿಸಿತು. ಮತ್ತು ಇದಕ್ಕೆ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯನ್ನು ಸಹ ಪಡೆದು ನಂತರ ಹೆಚ್ಚು ಪ್ರಚಾರ ಮಾಡಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/6.17 | 2020-21ನೇ ಸಾಲಿನಲ್ಲಿ ಡಿ.ಲಿಟ್ ಪದವಿಯ ವಿನಿಯಮ (Regulations) ಮತ್ತು ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | 2020-21ನೇ ಸಾಲಿನ ಡಿ.ಲಿಟ್ ಪದವಿಗೆ ಸಂಬಂಧಿಸಿದಂತೆ ವಿನಿಯಮ ಪುನರ್ ರಚನೆ ಮತ್ತು ಶುಲ್ಕಗಳನ್ನು ಪರಿಷ್ಕರಿಸಲು ಎಲ್ಲಾ ನಿಕಾಯದ ಡೀನರುಗಳ ಸಮಿತಿಯು ಪ್ರಸ್ತುತ ಶುಲ್ಕಕ್ಕಿಂತ ಶೇ.15ರಷ್ಟು ಶುಲ್ಕವನ್ನು ಹೆಚ್ಚಿಸುವ ಬಗ್ಗೆ ಶಿಫಾರಸ್ಸು ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/6.18 | Axiom institute of Education, [Youth Efforts For Society Trust (YES)], # 87, 4ನೇ ಕ್ರಾಸ್, ಯಾದವಗಿರಿ, ಮೈಸೂರು ಇವರ ಸಂಸ್ಥೆಯಲ್ಲಿ ಅಡಿಯಲ್ಲಿ 03 ಡಿಪ್ಲೋಮ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |

| | |
|---|---|
| ತೀರ್ಮಾನ | ಸದರಿ ವಿಷಯದ ಬಗ್ಗೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚಿಸಿ, ನಿರ್ಣಯವನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/6.19 | SJB College of Management Studies Research Centre, # 67, BGS Health & Education City, ಕೆಂಗೇರಿ, ಬೆಂಗಳೂರು ಇವರು ಈಗಾಗಲೇ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Commerce and Management ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ ಕನ್ನಡ ವಿಷಯಕ್ಕೆ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ |
| | Education City, ಕೆಂಗೇರಿ, ಬೆಂಗಳೂರು ಇವರು ಈಗಾಗಲೇ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Commerce and Management ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ ಕನ್ನಡ ವಿಷಯಕ್ಕೆ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಸಂಬಂಧದ ಕಾರ್ಯಸೂಚಿಯನ್ನು ಮೊದಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಅನುಮೋದನೆಯನ್ನು ಪಡೆದ ನಂತರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು ಸೂಕ್ತವೆಂದು ಸಭೆಯಲ್ಲಿ ಸದಸ್ಯರುಗಳು ಅಭಿಪ್ರಾಯಿಸಿದರು. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2021/6.20 | ಡಾ. ಪುಲಿಕೇಶಿ ವೈ ಶೆಟ್ಟಪ್ಪನವರ್ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತರಬೇತುದಾರರಾಗಿ ಸೇವೆ ಸಲ್ಲಿಸಿದ್ದು ವಯೋನಿವೃತ್ತಿ ಹೊಂದಿರುತ್ತಾರೆ. ಅವರ ಹುದ್ದೆಗೆ ಸಂಬಂಧಿಸಿದಂತೆ ಉಚ್ಛ ನ್ಯಾಯಾಲಯದಿಂದ ಬಂದಿರುವ ನಿರ್ದೇಶದನ್ವಯ ಕ್ರಮ ಕೈಗೊಂಡಿರುವ ಬಗ್ಗೆ. |
| ತೀರ್ಮಾನ | ಡಾ. ಪುಲಿಕೇಶಿ ವೈ ಶೆಟ್ಟಪ್ಪನವರ್, ಉಪ ನಿರ್ದೇಶಕರು (ನಿವೃತ್ತ), ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತರಬೇತುದಾರರಾಗಿ ಸೇವೆ ಸಲ್ಲಿಸಿದ್ದು, ಯುಜಿಸಿ ವೇತನ ಪರಿಷ್ಕರಣೆ ಮತ್ತು ಸೇವಾ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಉಚ್ಛ ನ್ಯಾಯಾಲಯದಿಂದ ಬಂದಿರುವ ನಿರ್ದೇಶನದನ್ವಯ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/6.21 | ಇತಿಹಾಸ ಅಧ್ಯಯನ ವಿಭಾಗ, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ ಮತ್ತು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| | ಇತಿಹಾಸ ಅಧ್ಯಯನ ವಿಭಾಗದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಆರ್.ರಾಜಣ್ಣ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಕರ್ನಾಟಕ ರಾಜ್ಯಪಾಲರ ಸಚಿವಾಲಯ, ಬೆಂಗಳೂರು ಇವರ ಅಧಿಸೂಚನೆ ದಿನಾಂಕ: 05-05-2021ರ ಅನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು ಇಲ್ಲಿಗೆ ಕುಲಸಚಿವರಾಗಿ ನೇಮಕಮಾಡಿ ನಿಯೋಜಿಸಲಾಗಿದೆ. ಪ್ರೊ. ಜಿ.ಟಿ.ಸೋಮಶೇಖರ್ ಅವರು ದಿನಾಂಕ: 21-10-2020ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪತ್ರದಲ್ಲಿ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರ ಸ್ಥಾನಕ್ಕೆ ಕಾರಣಾಂತರಗಳಿಂದ ಪರಿಗಣಿಸದಂತೆ ಕೋರಿದ್ದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯದ ನಿಯಮಾನುಸಾರ ಇತಿಹಾಸ ಅಧ್ಯಯನ ವಿಭಾಗಕ್ಕೆ ಪೂರ್ಣಕಾಲಿಕ ಅಧ್ಯಕ್ಷರನ್ನು ನೇಮಕ ಮಾಡುವವರೆಗೆ ಇತಿಹಾಸ ಅಧ್ಯಯನ ವಿಭಾಗದ ಆಡಳಿತಾತ್ಮಕ ಕೆಲಸಕಾರ್ಯಗಳು ಸುಲಲಿತವಾಗಿ ಜರುಗಬೇಕೆನ್ನುವ ದೃಷ್ಟಿಯಿಂದ ಪ್ರೊ.ಕೆ.ಸದಾಶಿವ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 05-05-2021ರಿಂದ ಅನ್ವಯವಾಗುವಂತೆ ಪ್ರಭಾರ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಘಟನೋತ್ತರವಾಗಿ ಅನುಮೋದಿಸಲು ಮತ್ತು |

| | |
|---|---|
| | ಪ್ರೊ. ಹೆಚ್.ನಾಗರಾಜು, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 08-03-2021ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1), ಬೆಂಗಳೂರು ಇವರ ಅಧಿಸೂಚನೆ ದಿನಾಂಕ: 23-06-2021ರ ಅನ್ವಯ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಇವರ ನಂತರದ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯಲ್ಲಿ ಪ್ರೊ. ಪಿ.ಜಯಶ್ರೀ ಇವರು ಹಿರಿಯರಾಗಿರುವುದರಿಂದ ಸದರಿ ಪ್ರಾಧ್ಯಾಪಕರನ್ನು ವಿಭಾಗಾಧ್ಯಕ್ಷರನ್ನು ನೇಮಿಸಬಹುದಾಗಿದೆ ಎಂದು ಕುಲಸಚಿವರು ತಿಳಿಸಿದರು.<br><br>ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದಲ್ಲಿ ಅಧ್ಯಕ್ಷರನ್ನಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಸಿ.ವೆಂಕಟೇಶ್ ಅವಧಿಯು ಪೂರ್ಣಗೊಂಡಿದ್ದು, ಆಡಳಿತಾತ್ಮಕ ಕೆಲಸಕಾರ್ಯಗಳು ಸುಲಲಿತವಾಗಿ ಜರುಗಬೇಕೆನ್ನುವ ದೃಷ್ಟಿಯಿಂದ ತಾತ್ಕಾಲಿಕವಾಗಿ ಶಿಕ್ಷಣ ನಿಕಾಯದ ಡೀನರನ್ನು ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲಾಗಿತ್ತು. ವಿಶ್ವವಿದ್ಯಾನಿಲಯದ ನಿಯಮಾನುಸಾರ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ಅಧ್ಯಕ್ಷರ ಸ್ಥಾನಕ್ಕೆ ಡಾ. ಎಸ್.ಮದಿಅಳಗನ್ ಅವರನ್ನು ನೇಮಕ ಮಾಡುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರ ನೇಮಕಾತಿಗೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮಾರ್ಗಸೂಚಿಯನುಸಾರ ಈ ಕೆಳಕಂಡ ಅಧ್ಯಯನ ವಿಭಾಗಗಳ ಹೆಸರಿನ ಮುಂದೆ ಸೂಚಿಸಿರುವವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು. |

| ಕ್ರ.ಸಂ. | ಅಧ್ಯಯನ ವಿಭಾಗ | ಅಧ್ಯಕ್ಷರಾಗಿ ನೇಮಕವಾದವರು |
|---|---|---|
| 1 | ಇತಿಹಾಸ ಅಧ್ಯಯನ ವಿಭಾಗ | ಪ್ರೊ. ಕೆ.ಸದಾಶಿವ |
| 2 | ಭೂಗೋಳಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ಪಿ.ಜಯಶ್ರೀ |
| 3 | ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗ | ಡಾ. ಎಸ್.ಮದಿಅಳಗನ್ |

**ಇತರೆ ವಿಷಯಗಳು:**

1. ಮಾನ್ಯ ಸದಸ್ಯರಾದ ಶ್ರೀ. ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಕುರಿತಂತೆ ವಿಶ್ವವಿದ್ಯಾನಿಲಯವು ಕ್ರಮವಹಿಸಿರುವ ಬಗ್ಗೆ ತಿಳಿಸಬೇಕೆಂದು ಸಭೆಯನ್ನು ಕೋರಿದರು.

   ನಂತರ ಮಾನ್ಯ ಕುಲಪತಿಯವರು ಮಾತನಾಡಿ, ಕೋವಿಡ್-9 ಸಮಯವಿರುವುದರಿಂದ ಮುಂದಿನ ಸಿಂಡಿಕೇಟ್ ಸಭೆಯು ನಡೆಯುವುದರೊಳಗೆ ಸಿಂಡಿಕೇಟ್ ಸದಸ್ಯರಿಗೆ ಮಾಹಿತಿಯನ್ನು ಒದಗಿಸಲಾಗುವುದೆಂದು ತಿಳಿಸಿದರು.

2. ಮಾನ್ಯ ಸದಸ್ಯರಾದ ಶ್ರೀ ಎಂ.ಬಿ.ಗಪ್ಪಣ್ಣರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳ ಬಗ್ಗೆ ಒಬ್ಬರು ಸದಸ್ಯರಿಗೆ ಮಾತ್ರ ಮಾಹಿತಿ ತಲುಪಿದ್ದು, ಉಳಿದ ಸದಸ್ಯರುಗಳಿಗೆ ಮಾಹಿತಿ ನೀಡದಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದರು.

   ಮಾನ್ಯ ಸದಸ್ಯರ ಅಭಿಪ್ರಾಯವನ್ನು ಶ್ರೀ ಎಸ್.ಡಿ. ದೊಡ್ಡಚಾರಿರವರು ಅನುಮೋದಿಸಿದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಕಾರ್ಯಕ್ರಮಗಳು ಹಾಗೂ ಸಿಂಡಿಕೇಟ್ ಸಭೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಒದಗಿಸಲು ವಿಶ್ವವಿದ್ಯಾನಿಲಯದ ವತಿಯಿಂದ ಒಬ್ಬರು Liason Officer ಅನ್ನು ನೇಮಕಮಾಡಿ ಅವರ ಮೂಲಕ ಕಾರ್ಯನಿರ್ವಹಿಸುವುದಾಗಿ ಸಭೆಗೆ ತಿಳಿಸಿದರು.

3. ಮಾನ್ಯ ಸದಸ್ಯರಾದ ಶ್ರೀ ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ಕೆಲವೇ ಸದಸ್ಯರುಗಳ ವಿಷಯವನ್ನು ಸಿಂಡಿಕೇಟ್‌ಗೆ ಮಂಡಿಸುತ್ತಿರುವ ವಿಷಯವನ್ನು ಸಭೆಯಲ್ಲಿ ಗಮನಕ್ಕೆ ತಂದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯಲಿರುವ ಸಿಂಡಿಕೇಟ್ ಸಭೆಯ ನಿಗಧಿತ ದಿನಾಂಕದ ಮೂರು ದಿನಗಳ ಮುಂಚೆ ಸದಸ್ಯರುಗಳು ನೀಡುವ ವಿಷಯವನ್ನು ಮಂಡಿಸಲಾಗುವುದು. ಸಿಂಡಿಕೇಟ್ ನಿಗಧಿಯಾಗಿದ್ದರೂ ಕೊನೆಗಳಿಗೆಯಲ್ಲಿ ಸದಸ್ಯರು ಕಳುಹಿಸುವ ವಿಷಯಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಚರ್ಚಿಸಲು ಅನುವು ಮಾಡಿಕೊಡಲಾಗುವುದೆಂದು ತಿಳಿಸಿದರು. ಸಿಂಡಿಕೇಟ್ ಸಭೆಯು ಇದನ್ನು ಅನುಮೋದಿಸಿತು.

4. ಮಾನ್ಯ ಸದಸ್ಯರಾದ ಶ್ರೀ ಎಂ.ಬಿ.ಗಪ್ಪಣ್ಣರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಪ್ರಸ್ತಾಪಿಸಿ ಒಬ್ಬರು ಸದಸ್ಯರು ಅಧ್ಯಕ್ಷರ ಜೊತೆ ಇರುವುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

5. ಮಾನ್ಯ ಸದಸ್ಯರಾದ ಡಾ. ಜಿ. ವೆಂಕಟೇಶ್ ಕುಮಾರ್‌ರವರು ಮಾತನಾಡಿ, ಮಾಧ್ಯಮಗಳ ಎದುರು ತೆಗೆದುಕೊಂಡ ಸಿಂಡಿಕೇಟ್ ನಿರ್ಣಯಗಳ ಬಗ್ಗೆ ಅಧ್ಯಕ್ಷರು ಮಾತ್ರ ಮಾಹಿತಿ ನೀಡುವುದು ಸೂಕ್ತವೆಂದೂ ಇತರೆ ಯಾವುದೇ ಸದಸ್ಯರುಗಳು ಮಾಧ್ಯಮದವರೊಂದಿಗೆ ಮಾಹಿತಿ ಹಂಚಿಕೊಳ್ಳದಿರುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

ಇನ್ನು ಮುಂದೆ ಸಿಂಡಿಕೇಟ್ ನಿರ್ಣಯಗಳ ಬಗ್ಗೆ ಅವಶ್ಯವಿದ್ದಲ್ಲಿ ಅಧ್ಯಕ್ಷರು Press Meet ಕರೆದು ಮಾಧ್ಯಮಗಳಿಗೆ ತಿಳಿಸಬಹುದಾಗಿದೆಯೆಂದು ಸಿಂಡಿಕೇಟ್‌ನಲ್ಲಿ ನಿರ್ಧರಿಸಲಾಯಿತು.

6. ಮಾನ್ಯ ಸದಸ್ಯರಾದ ಡಾ. ಚೈತ್ರನಾರಾಯಣ್‌ರವರು ಮಾತನಾಡಿ, ಹಿಂದುಳಿದ ವರ್ಗಗಳ ಘಟಕಕ್ಕೆ ಪತ್ರಿಕೋಧ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಮಮತ ಎನ್. ರವರನ್ನು ನಿಯೋಜಿಸಬೇಕೆಂದು ವಿದ್ಯಾರ್ಥಿಗಳು ಶಿಫಾರಸ್ಸು ಮಾಡಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ನಂತರ ಸಭೆಯು ಮಾನ್ಯ ಅಧ್ಯಕ್ಷರ ನಿರ್ಣಯವನ್ನು ಅನುಮೋದಿಸಿತು.

7. ಮಾನ್ಯ ಸದಸ್ಯರಾದ ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ ಮಹಾರಾಣಿ ಕಲಾ ಕಾಲೇಜಿನಲ್ಲಿ ನಡೆದ ಪರೀಕ್ಷಾ ಅಕ್ರಮದ ಬಗ್ಗೆ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾತನಾಡಿ ಪರೀಕ್ಷಾ ಅಕ್ರಮದಲ್ಲಿ ಸಿಲುಕಿರುವ 06 ಮಂದಿಗೆ ನೋಟೀಸ್ ಅನ್ನು ನೀಡಲಾಗಿದ್ದು, ಅವರಲ್ಲಿ ಸದರಿ ಕಾಲೇಜಿನ ಪ್ರಾಂಶುಪಾಲರು ಮಾತ್ರ ಹಾಜರಾಗಿ ಹೇಳಿಕೆ ನೀಡಿದ್ದಾರೆ. ವಿಶ್ವವಿದ್ಯಾನಿಲಯ ನಿಯಮಾನುಸಾರ ಮತ್ತೊಂದು ಬಾರಿ ನೋಟೀಸ್ ಅನ್ನು ನೀಡಿ, ನಂತರ ಸೂಕ್ತ ಕ್ರಮ ಕೈಗೊಂಡ ನಂತರ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ವಿಷಯವನ್ನು ಸಭೆಯಲ್ಲಿ ಮಂಡಿಸದಿರುವುದರ ಬಗ್ಗೆ ಸ್ಪಷ್ಟೀಕರಣ ನೀಡಿದರು.

8. ಮಾನ್ಯ ಸದಸ್ಯರಾದ ಡಾ. ಜಿ.ವೆಂಕಟೇಶ್‌ಕುಮಾರ್ ಇವರು ಮಾತನಾಡಿ, ಶ್ರೀ ರವಿವರ್ಮ ಎಂಬ ವಿದ್ಯಾರ್ಥಿ ಸ್ನಾತಕೋತ್ತರ ವಿಷಯದಲ್ಲಿ ಶೇ.74% ಅಂಕವನ್ನು ಪಡೆದಿದ್ದು, ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ವಿಶೇಷ ಘಟಕಕ್ಕೆ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಆದಾಯ ಪ್ರಮಾಣಪತ್ರವನ್ನು ನೀಡಲು ಒಂದು ದಿನ ವಿಳಂಬವಾಗಿದ್ದಕ್ಕೆ ವಿಶ್ವವಿದ್ಯಾನಿಲಯವು ಶಿಷ್ಯವೇತನ ನೀಡದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಕೂಲಂಕುಷವಾಗಿ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು.

9. ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದಲ್ಲಿ ನಡೆದ ಪಂದ್ಯಾವಳಿಯಲ್ಲಿ ವಿಶ್ವವಿದ್ಯಾನಿಲಯದ ಲಾಂಛನ ಬಳಸಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಎಲ್ಲಾ ಕಾಲೇಜುಗಳಿಂದ ರೂ.300/- ರಂತೆ ವಸೂಲಿ ಮಾಡಿ, ಸಹಿ ಇಲ್ಲದೇ ರಶೀತಿಯನ್ನು ನೀಡಿರುವುದಲ್ಲದೆ, ವಸೂಲಿಯಾದ ಹಣವನ್ನು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮಾ ಮಾಡದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಹಣಕಾಸು ಅಧಿಕಾರಿಯವರು ಮಾತನಾಡಿ, ಸದರಿ ವಿಷಯದ ಬಗ್ಗೆ ದೈಹಿಕ ಶಿಕ್ಷಣ ವಿಭಾಗದ ಅಧ್ಯಕ್ಷರಾದ ಡಾ. ವೆಂಕಟೇಶ್ ಅವರು ಆಯೋಜಿಸಿರುವರೇ ಅಥವಾ ಯಾರು ಪಂದ್ಯಾವಳಿಯನ್ನು ನಡೆಸಿರುವರು ಎಂಬ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲವೆಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿಷಯದ ಬಗ್ಗೆ ದೈಹಿಕ ಶಿಕ್ಷಣ ಕೇಂದ್ರದ ನಿರ್ದೇಶಕರು ಹಾಗೂ ಅಧ್ಯಕ್ಷರನ್ನು ವಿಚಾರಿಸಿ, ನಂತರ ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

10. ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡುತ್ತಾ, ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕರಾಗಿ ನಿವೃತ್ತರಾದ ಪ್ರೊ. ಶಿವರಾಜಪ್ಪರವರು ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಹಲವು ಪುಸ್ತಕಗಳನ್ನು ಹೊರತಂದಿದ್ದು, ಬಾಕಿ ಇನ್ನುಳಿದ ಕಾರ್ಯಕ್ಕೂ ಅವರಿಗೆ ಜವಾಬ್ದಾರಿ ನೀಡಬೇಕೆಂದು ಸಭೆಯ ಗಮನಕ್ಕೆ ತಂದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿಷಯದ ಬಗ್ಗೆ ಪ್ರೊ.ಶಿವರಾಜಪ್ಪನವರ ಜೊತೆ ಸಮಾಲೋಚಿಸಿ ಮಾಹಿತಿಯನ್ನು ಪಡೆಯಲಾಗುವುದೆಂದು ಮತ್ತು ಮುಂದಿನ ಕ್ರಮವಹಿಸಲಾಗುವುದೆಂದೂ ಸಭೆಗೆ ತಿಳಿಸಿದರು.

11. ಭಾರತದ ಅತ್ಯುತ್ತಮ ಕಾಲೇಜುಗಳ ಸಮೀಕ್ಷೆಯಲ್ಲಿ ರಾಜ್ಯದಲ್ಲೇ ಮೊದಲನೇ ಹಾಗೂ ಶತಮಾನೋತ್ಸವ ಆಚರಣೆ ಮಾಡಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮತ್ತೊಂದು ಗರಿಮೆ ಸಿಕ್ಕಿದ್ದು, "ಇಂಡಿಯಾ ಟುಡೆ" ನಡೆಸಿದ 25ನೇ ವರ್ಷದ ಸಮೀಕ್ಷೆಯಲ್ಲಿ ಆರ್ಕಿಟೆಕ್ಚರ್(ವಾಸ್ತುಶಾಸ್ತ್ರ) ವಿಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ "ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್" 7ನೇ ಸ್ಥಾನವನ್ನು ಪಡೆದುಕೊಂಡಿರುವುದಕ್ಕೆ ಮಾನ್ಯ ಸದಸ್ಯರುಗಳೆಲ್ಲರೂ ಸಂತಸವನ್ನು ವ್ಯಕ್ತಪಡಿಸಿದರು.

12. ಮಾನ್ಯ ಸದಸ್ಯರಾದ ಡಾ. ಚೈತ್ರ ನಾರಾಯಣರವರು ಹಾಗೂ ಶ್ರೀ. ಎಂ.ಬಿ. ಗಪ್ಪಣ್ಣರವರು ಮಾತನಾಡುತ್ತಾ, ಮಹಾರಾಜ ಕಾಲೇಜು ಕ್ಯಾಂಪಸ್‌ನಲ್ಲಿರುವ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ಪೂರ್ಣಕಾಲಿಕ ವೈದ್ಯಾಧಿಕಾರಿಗಳಾದ ಡಾ.ಬಸವರಾಜುರವರು ಆರೋಗ್ಯ ಕೇಂದ್ರಕ್ಕೆ ನಿಗದಿಪಡಿಸಿರುವ ಅವಧಿಯಲ್ಲಿ ಉಪಸ್ಥಿತರಿಲ್ಲದಿರುವುದನ್ನು ಹಲವಾರು ಬಾರಿ ಗಮನಿಸಲಾಗಿದೆ. ಈ ಸಂಬಂಧ ಆರೋಗ್ಯ ಕೇಂದ್ರದಲ್ಲಿ ವಿಚಾರಿಸಿದರೆ ಅಲ್ಲಿನ ಉದ್ಯೋಗಿಗಳು ಕೂಡ ಸಿಂಡಿಕೇಟ್ ಸದಸ್ಯರುಗಳ ಜೊತೆ ದೂರವಾಣಿ ಮುಖಾಂತರ ಸರಿಯಾಗಿ ಸ್ಪಂದಿಸುವುದಿಲ್ಲ ಹಾಗೂ ಸದರಿಯವರು ಪೂರ್ಣಕಾಲಿಕ ವೈದ್ಯಾಧಿಕಾರಿಯಾಗಿರುವುದರಿಂದ ನಿಗಧಿತ ಅವಧಿಯಲ್ಲಿ ಆರೋಗ್ಯ ಕೇಂದ್ರದಲ್ಲೇ ಉಪಸ್ಥಿತರಿದ್ದು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳೊಂದಿಗೆ ಸಂಯಮದೊಂದಿಗೆ ವರ್ತಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸಭೆಯ ಗಮನಕ್ಕೆ ತಂದರು.

ನಂತರ ಮಾನ್ಯ ಕುಲಸಚಿವರು ಮಾತನಾಡಿ, ಡಾ.ಬಸವರಾಜುರವರು ನುರಿತ ವೈದ್ಯಾಧಿಕಾರಿಗಳು. ಇವರು ವಿಶ್ವವಿದ್ಯಾನಿಲಯದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು/ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳು, ವಿದ್ಯಾರ್ಥಿಗಳು ಹಾಗೂ ಸಂಶೋಧಕರುಗಳಿಗೆ ಅನೇಕ ಕ್ಯಾಂಪ್‌ಗಳನ್ನು ನಡೆಸಿ, ವೈದ್ಯ ಸೇವೆಯನ್ನು ನೀಡಿರುವ ಬಗ್ಗೆ ಸಭೆಗೆ ತಿಳಿಸಿದರು. ಅಲ್ಲದೇ ಕೋವಿಡ್-19 ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಉದ್ಯೋಗಿಗಳಿಗೂ ಈವರೆಗೆ 2800ಕ್ಕೂ ಹೆಚ್ಚು ಲಸಿಕೆಯನ್ನು ನೀಡಿರುವ ಕಾರ್ಯದಲ್ಲಿ ಸದರಿರವರು ಸೇವಾ ಪ್ರವೃತ್ತರಾಗಿರುವುದನ್ನು ಸಭೆಯಲ್ಲಿ ಶ್ಲಾಘಿಸಿದರು. ತಾವು ನೀಡಿರುವ ದೂರಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿಯವರೊಂದಿಗೆ ವಿಚಾರಿಸುವುದಾಗಿ ಸಭೆಗೆ ತಿಳಿಸಿದರು.

ಡಾ. ಅಪ್ಪಾಜಿಗೌಡರು, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. ಇವರು ಮಾತನಾಡಿ, ಇದುವರೆವಿಗೂ ವಿಶ್ವವಿದ್ಯಾನಿಲಯದ ವತಿಯಿಂದ ಎಷ್ಟು ಕೋವಿಡ್ ಲಸಿಕೆಯನ್ನು ಹಾಕಲಾಗಿದೆ ಎಂಬ ಬಗ್ಗೆ ವಿವರವನ್ನು ನೀಡುವಂತೆ ಸಭೆಗೆ ತಿಳಿಸಿದರು.

ನಂತರ ಮಾನ್ಯ ಕುಲಸಚಿವರು ಮಾತನಾಡಿ, ಈಗಾಗಲೇ 2868 ಲಸಿಕೆ ವಿಶ್ವವಿದ್ಯಾನಿಲಯದ ವತಿಯಿಂದ ನೀಡಿದ್ದು, 12,863 ಲಸಿಕೆಗೆ ಬೇಡಿಕೆ ಇಟ್ಟಿದ್ದು, ಕಾಲೇಜುಗಳ ಪ್ರಾಂಶುಪಾಲರುಗಳ ಮುಖಾಂತರ

ವಿದ್ಯಾರ್ಥಿಗಳ ಪಟ್ಟಿಯನ್ನು ಡಿ.ಹೆಚ್.ಓ ರವರಿಗೆ ಕಳುಹಿಸಿ, ತದನಂತರ ಆಯಾಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಲಸಿಕೆಯನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ವಿವರಿಸಿದರು.

13. ಮಾನ್ಯ ಸದಸ್ಯರಾದ ಡಾ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ಆಪ್ತ ಸಹಾಯಕರುಗಳು ಪದೋನ್ನತಿ ಹೊಂದಿದ್ದರೂ ಸಹ ಹುದ್ದೆಗನುಗುಣವಾಗಿ ಕಾರ್ಯನಿರ್ವಹಿಸದೇ ಸುಮಾರು 05ರಿಂದ 15 ವರ್ಷಗಳ ಕಾಲ ಆಪ್ತಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆಬಂದಿರುತ್ತದೆ. ಆದುದರಿಂದ, ಪ್ರಸ್ತುತವಿರುವ ಆಪ್ತಸಹಾಯಕರುಗಳನ್ನು ಹುದ್ದೆಗನುಗುಣವಾಗಿ ಕಾರ್ಯನಿರ್ವಹಿಸಲು ಬಿಡುಗಡೆಗೊಳಿಸಿ, ಇತರೆ ಉದ್ಯೋಗಿಗಳಿಗೂ ಆಪ್ತ ಸಹಾಯಕರನ್ನಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

14. ಮಾನ್ಯ ಸದಸ್ಯರುಗಳಾದ ಶ್ರೀ ಕುಮಾರ ಮತ್ತು ಶ್ರೀಮತಿ ಕೆ. ನಾಗರತ್ನಮ್ಮ ಅವರುಗಳು ಮಾತನಾಡುತ್ತಾ, ತಮ್ಮ ಸಿಂಡಿಕೇಟ್ ಸದಸ್ಯತ್ವದ ಅವಧಿ ಪೂರ್ಣಗೊಳ್ಳುತ್ತಿದ್ದು, ಮಾನ್ಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಮತ್ತು ಇತರೆ ಸದಸ್ಯರುಗಳು ಇದುವರೆಗೂ ಸಹಕಾರವನ್ನು ನೀಡಿರುವುದಕ್ಕೆ ವಂದನೆಯನ್ನು ಸಲ್ಲಿಸಿದರು.

ಮಾನ್ಯ ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರಾದ ಶ್ರೀ ಪ್ರಕಾಶ್ ಇವರು ನಿಧನರಾದ ಪ್ರಯುಕ್ತ ಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ಅಂತಿಮವಾಗಿ ಸಕ್ರಿಯವಾಗಿ ಪಾಲ್ಗೊಂಡು ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆಗಳನ್ನರ್ಪಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು